**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 27.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 3 ಮತ್ತು 4 ನೇ ಎದುರುದಾರರ ಪರ ಶ್ರೀ ಬಿ ಎಸ್ ಎಸ್ ವಕೀಲರಿಂದಃ**

3 ಮತ್ತು 4 ನೇ ಎದುರುದಾರರು ನನ್ನ ಮೃತ ಸೊಸೆ ಶಿಲ್ಪಾ ಇವರ ತಂದೆ ಮತ್ತು ತಾಯಿ ಇರುತ್ತಾರೆ. 3 ಮತ್ತು 4 ನೇ ಎದುರುದಾರರ ಸ್ವಂತ ಊರು ಯಾವುದು ಎಂದು ಗೊತ್ತಿದೆಯಾ ಎಂದರೆ ಸಾಕ್ಷಿ ಧಾರವಾಡ ಎನ್ನುತ್ತಾರೆ. ಅವರ ಖುದ್ದು ಊರು ಯಾವುದು ಎಂದು ನನಗೆ ಗೊತ್ತಿಲ್ಲ. 4 ನೇ ಎದುರುದಾರರು ಸಮಾಜ ಸೇವೆ ಮಾಡುತ್ತಾರೆ ಎಂದು ನಮಗೆ ಹೇಳಿದ್ದರು ಹಾಗೂ 3 ನೇ ಎದುರುದಾರರು ಇನ್ಸೂರನ್ಸ ಏಜೆಂಟ್ ಎಂಬುದಾಗಿ ಹೇಳಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿಯವರಿಗೆ ಹೆಣ್ಣು ಮಕ್ಕಳು ಮಾತ್ರ ಮಕ್ಕಳು ಎಂದರೆ ಸರಿ. ಅವರಿಗೆ ಗಂಡು ಮಕ್ಕಳು ಇಲ್ಲ ಎಂದರೆ ಸರಿ. 3 ಮತ್ತು 4 ನೇ ಎದುರುದಾರರು ನನ್ನ ಸೊಸೆ ಶಿಲ್ಪಾ ಹಾಗೂ ನನ್ನ ಮಗನ ಮೇಲೆ ಅವಲಂಬಿತರಾಗಿದ್ದರು ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಾನು ನ್ಯಾಯಾಲಯಕ್ಕೆ ಪರಿಹಾರಕ್ಕೆ ಅರ್ಜಿ ಸಲ್ಲಿಸಿದ್ದು ಅದರಲ್ಲಿ 3 ಮತ್ತು 4 ನೇ ಎದುರುದಾರರು ನನ್ನ ಸೊಸೆ ಶಿಲ್ಪಾ ಹಾಗೂ ನನ್ನ ಮಗನ ಮೇಲೆ ಅವಲಂಬಿತರಾಗಿರಲಿಲ್ಲ ಎಂದು ನಾನು ಬರೆದುಕೊಂಡಿಲ್ಲ ಎಂದರೆ ಸಾಕ್ಷಿ ಅದೇನೋ ನನಗೆ confuse ಆಗಿದೆ ಆದರೆ ಅವರು ಅವಲಂಬಿತರಾಗಿರಲಿಲ್ಲ ಎನ್ನುತ್ತಾರೆ. ನನ್ನ ಮಗ ವಿನಾಯಕಸ್ವಾಮಿ ಹಾಗೂ ನನ್ನ ಸೊಸೆ ಮೃತ ಶಿಲ್ಪಾ ಇವರದು 2014 ರಲ್ಲಿ

ಮದುವೆಯಾಗಿರುತ್ತದೆ. ಮದುವೆ ಸಮಯದಲ್ಲಿ ನನ್ನ ಸೊಸೆಯನ್ನು ನೋಡಲು ನಾವು ಧಾರವಾಡಕ್ಕೆ ಹೋದಾಗ ಅವರು ಹಿರಿಯರ ಸಮಕ್ಷಮದಲ್ಲಿ ನಾವು ನಮ್ಮ ಮಗಳು ಹಾಗೂ ಅಳಿಯನ ಮೇಲೆ ಅವಲಂಬಿತರಾಗಿದ್ದೇವೆ ಎಂದು ಸ್ಪಷ್ಟನೆ ಕೊಟ್ಟಿದ್ದರು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾವು ಅದಕ್ಕೆ ಒಪ್ಪಿಕೊಂಡು ಸದರಿ ಶಿಲ್ಪಾಳನ್ನು ನಮ್ಮ ಮಗನಿಗೆ ಮದುವೆ ಮಾಡಿಕೊಂಡಿರುತ್ತೇವೆ ಎಂದರೆ ಅದು ಸರಿಯಲ್ಲ ಎನ್ನುತ್ತಾರೆ. ಶಿಲ್ಪಾಳ ದುಡಿಮೆಯಿಂದಲೇ ನಮ್ಮ ಮನೆ ನೆಡೆಯುತ್ತಿದೆ ಎಂದು ಹಿರಿಯರ ಮೂಲಕ ಅವರು ನಮಗೆ ಹೇಳಿದ್ದರು ಎಂದರೆ ಸಾಕ್ಷಿ ಆ ಪ್ರಶ್ನೇಯೇ ಬಂದಿಲ್ಲ ಎನ್ನುತ್ತಾರೆ. ನನ್ನ ಸೊಸೆ ಆಯಿತು ಮಗ ಆಯಿತು ಅವರಿಗೆ ಧಾರವಾಡಕ್ಕೆ ಒಮ್ಮೆ ಬಂದು ಅವರಿಗೆ ಬೇಕಾದ ಉಪಜೀವನದ ವಸ್ತುಗಳನ್ನು ಕೊಡಿಸಿ ಹೋಗುತ್ತಿದ್ದರು ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಮಗ ನನಗೆ ತಿಳಿಸದೇ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎನ್ನುತ್ತಾರೆ. ಈ ಕೇಸಿನ 3 ಮತ್ತು 4 ನೇ ಎದುರುದಾರರ ನನ್ನ ಸೊಸೆ ಹಾಗೂ ಮಗನ ಆರೈಕೆ ಹಾಗೂ ಸುಪರ್ದಿಯಲ್ಲೇ ಇದ್ದರು ಎಂದರೆ ಸಾಕ್ಷಿ ಇಲ್ಲ ಅದು ಸರಿಯಲ್ಲ ಎನ್ನುತ್ತಾರೆ. ನನ್ನ ಸೊಸೆ ಶಿಲ್ಪಾ ಹಾಗೂ ನನ್ನ ಮಗ ಸೇರಿ ಸುಮಾರು 30-40 ಸಾವಿರ ರೂ.ಗಳ ಸಾಮಾನುಗಳನ್ನು ಕೊಡಿಸಿ ಖರ್ಚಿಗೆ ಕೊಟ್ಟು ಹೋಗುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಅದೆಲ್ಲ ಸುಳ್ಳು ಎನ್ನುತ್ತಾರೆ. 3 ಮತ್ತು 4 ನೇ ಎದುರುದಾರರು ಬೆಂಗಳೂರಿನಲ್ಲಿ ಶಿಲ್ಪಾ ಅವರ ಮಗಳು ಹಾಗೂ ಅಳಿಯನ ಆರೈಕೆ ಹಾಗೂ ಸುಪರ್ದಿಯಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿ ಅದು ಸರಿಯಲ್ಲ ನಾನು, ನನ್ನ ಮಗ, ನನ್ನ ಸೊಸೆ ಹಾಗೂ ನನ್ನ ಮೊಮ್ಮಗ ಇರುತ್ತಿದ್ದೇವು ಎನ್ನುತ್ತಾರೆ. ನಾನು ಮಗಳಾದ ವಿನೂತಾ ಇವರ ಬಳಿ ಮುಂಡಗೋಡದಲ್ಲಿ ಖಾಯಂ ವಾಸವಿರುತ್ತಿದ್ದೆ ಎಂದರೆ ಅದು ಸರಿಯಲ್ಲ ಎನ್ನುತ್ತಾರೆ. ನಾನು ಯಾವತ್ತಿಗೂ ನನ್ನ ಸೊಸೆ ಹಾಗೂ ಮಗನ ಜೊತೆ ಅವರ ಆರೈಕೆಯಲ್ಲಿ ಇರುತ್ತಿರಲಿಲ್ಲ 3

ಮತ್ತು 4 ನೇ ಎದುರುದಾರರೇ ಇರುತ್ತಿದ್ದರು ಎಂದರೆ ಸಾಕ್ಷಿ ಅವರು ಯಾವತ್ತಿಗೂ ಬಂದೇ ಇಲ್ಲ ನಾನೇ ಇರುತ್ತಿದ್ದೆ ಎನ್ನುತ್ತಾರೆ. ನನ್ನ ಸೊಸೆ ಹಾಗೂ ಮಗ ಧಾರವಾಡಕ್ಕೆ 3 ಮತುತ 3 ನೇ ಎದುರುದಾರರ ಮನೆಗೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸಾಕ್ಷಿ ಹೂಂ ಎಂದು ನುಡಿದು ಹಬ್ಬ ಹರಿದಿನಗಳು ಇದ್ದಾಗ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಮಗ ಹಾಗೂ ಸೊಸೆ 3 ಮತ್ತು ರಿನೇ ಎದುರುದಾರರಿಗೆ ಅಗತ್ಯಕ್ಕೆ ಬೇಕಾದ ಎಲ್ಲಾ ವಸ್ತುಗಳನ್ನು ಕೊಡಿಸಿ ಖರ್ಚಿಗೆಂದು 30 ರಿಂದ 40 ಸಾವಿರ ರೂ.ಗಳನ್ನು ಕೊಟ್ಟು ಹೋಗುತ್ತಿದ್ದರು ಎಂದರೆ ಇದನ್ನೆಲ್ಲ ಆತ ನನಗೆ ಯಾವತ್ತೂ ಹೇಳಿಯೇ ಇಲ್ಲ ಎನ್ನುತ್ತಾರೆ. ನಿಮ್ಮ ಸೊಸೆಯಾರು ಕೊಡುತ್ತಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಮಗ ಆಯಿತು ಸೊಸೆಯಾಯಿತು ಅನ್ಯೋನ್ಯವಾಗಿ ಇದ್ದರು ಎಂದರೆ ಸಂಬಂಧ ಹೇಗಿರಬೇಕೋ ಹಾಗೆಯೇ ಇದ್ದರು ಎನ್ನುತ್ತಾರೆ. ತಾಯಿಯಾಯಿತು ಮಗಳಾಯಿತು ಅತ್ಯಂತ ಪ್ರೀತಿಯಿಂದ ಇರುತ್ತಾರೆ ಎಂದರೆ ಸರಿ. ತಂದೆ ತಾಯಿಗಳಿಗೆ ಏನಾದರೂ ಲೋಪ ದೋಷವಾದರೆ ಹೆಣ್ಣು ಮಕ್ಕಳೇ ಸಹಾಯ ಮಾಡುತ್ತಾರೆ ಎಂದರೆ ಸಾಕ್ಷಿ ಗಂಡು ಮಕ್ಕಳು ಇಲ್ಲದಿದ್ದರೆ ಮಾಡುತ್ತಾರೆ ಎನ್ನುತ್ತಾರೆ. ಸದರಿಯವರಿಗೆ ಗಂಡು ಮಕ್ಕಳು ಇಲ್ಲ ಆ ಕಾರಣಕ್ಕೆ ಇವರೇ ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದರೆ ಸಾಕ್ಷಿ ಮೂವರು ಹೆಣ್ಣು ಮಕ್ಕಳು ಇರುತ್ತಾರೆ ಮೂವರದು ಜವಾಬ್ದಾರಿ ಇರುತ್ತದೆ ಎನ್ನುತ್ತಾರೆ. ನನ್ನ ಸೊಸೆ ಹಾಗೂ ಮಗ 3 ಮತ್ತು 4 ನೇ ಎದುರುದಾರರ ಜೊತೆ ಫೋನ್ ಮಾಡಿ ವಿಡಿಯೋ ಕಾಲ್ ಮಾಡಿ ಮಾತನಾಡುತ್ತಿದ್ದರು ಎಂದರೆ ಸಾಕ್ಷಿ ಸೊಸೆ ಮಾತನಾಡುತ್ತಿದ್ದಳು ಮಗ ಮಾತನಾಡುತ್ತಿರಲಿಲ್ಲ ಎನ್ನುತ್ತಾರೆ. ಸದರಿ ಅಪಘಾತವಾದ ತಕ್ಷಣ 3 ನೇ ಮತ್ತು 4 ನೇ ಎದುರುದಾರರು ಆಸ್ಪತ್ರೆಗೆ ಹೋಗಿರುತ್ತಾರೆ ಎಂದರೆ ಸರಿ. ನಂತರ ಆಸ್ಪತ್ರೆಯಲ್ಲಾಯಿತು ಹಾಗೂ ಪೊಲೀಸ್ ಠಾಣೆಯಲ್ಲಾಯಿತು ಎಲ್ಲಾ ಕೆಲಸಗಳನ್ನು 3 ಮತ್ತು 4 ನೇ

ಎದುರುದಾರರೇ ಮಾಡಿರುತ್ತಾರೆ ಎಂದರೆ ಅದು ಸರಿಯಲ್ಲ ಎನ್ನುತ್ತಾರೆ. 2 ನೇ ಅರ್ಜಿದಾರರಿಗೆ ಪೆಟ್ಟು ಬಿದ್ದಾಗ ಆತನನ್ನು 3 ಮತ್ತು 4 ನೇ ಎದುರುದಾರರು ಆಸ್ಪತ್ರೆಗೆ ದಾಖಲಿಸಿ ಆಸ್ಪತ್ರೆ ಖರ್ಚನ್ನು ಅವರೇ ಡೆಪಾಸಿಟ್ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಮೈದುನನ ಮಗ ಇದ್ದ ಆತ ಮಾಡಿರುತ್ತಾನೆ ಎನ್ನುತ್ತಾರೆ. ನಾನು ಅಪಘಾತವಾದ ಸುಮಾರು 4-5 ದಿನಗಳ ನಂತರ ಆಸ್ಪತ್ರೆಗೆ ಹೋಗಿದ್ದು ಆದರೆ ಅಲ್ಲಿಯವರೆಗೂ 3 ಮತ್ತು 4 ನೇ ಎದುರುದಾರರು ಅವರನ್ನು ನೋಡಿಕೊಂಡಿರುತ್ತಾರೆ ಎಂದರೆ ಅವರು ಧಾರವಾಡದ ಆಸ್ಪತ್ರೆಯಲ್ಲಿದ್ದರು ನನ್ನ ಮೈದುನನ ಮಗನೇ ಅವರೆಲ್ಲರನ್ನು ನೋಡಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. 3 ಮತ್ತು 4 ನೇ ಎದುರುದಾರರ ಜೀವನ ನನ್ನ ಸೊಸೆ ಶಿಲ್ಪಾ ಇವರ ದುಡಿಮೆಯ ಮೇಲೆ ನೆಡೆಯುತ್ತಿತ್ತು ಎಂದರೆ ಸಾಕ್ಷಿ ಹಾಗೇನು ಇಲ್ಲ ಎನ್ನುತ್ತಾರೆ. 3 ಮತ್ತು 4 ನೇ ಎದುರುದಾರರಿಗೆ ಯಾವುದೇ ರೀತಿಯ ಉತ್ಪನ್ನ ಇಲ್ಲ ಎಂದರೆ ಸಾಕ್ಷಿ ಆ ರೀತಿ ಏನೂ ಇಲ್ಲ ಅವರ ಅಮ್ಮ ಇನ್ಸೂರನ್ಸ ಏಜೆಂಟ್ ಇದ್ದರು ಮತ್ತು ಮುರು ಜನ ಮಕ್ಕಳು ಇರುತ್ತಾರೆ ನಮ್ಮ ಮೇಲೆ ಅವಲಂಬಿತರಾಗುತ್ತೇವೆ ಎಂದು ಅವರು ಯಾವತ್ತೂ ಹೇಳಿಲ್ಲ ಎನ್ನುತ್ತಾರೆ.

ಅಪೋಲೋ ಆಸ್ಪತ್ರೆಯಲ್ಲಿ ನನ್ನ ಮೊಮ್ಮಗ ದಾಖಲಾಗಿದ್ದು ಆ ಸಮಯದಲ್ಲಿ 3 ಮತ್ತು 4 ನೇ ಎದುರುದಾರರೇ ಎಲ್ಲಾ ರೀತಿಯ ಖರ್ಚುಗಳನ್ನು ಮಾಡಿದ್ದು ಆ ಹಣವನ್ನು ನಾವು ಕೊಡುತ್ತೇವೆ ಎಂದು ಹೇಳಿದ್ದು ಅದನ್ನು ಇನ್ನೂ ಕೂಡ ನಾವು ಕೊಟ್ಟಿಲ್ಲ ಎಂದರೆ ಸಾಕ್ಷಿ ಹಾಗೇನು ಇಲ್ಲ ಎನ್ನುತ್ತಾರೆ. ಹಾಗೂ ಮುಂದುವರೆದು ಇನ್ನೂ ಕೂಡ ನಾವು ಖರ್ಚು ಮಾಡುತ್ತಿದ್ದೇವೆ ಎನ್ನುತ್ತಾರೆ. 3 ಮತ್ತು 4 ನೇ ಎದುರುದಾರರು ನನ್ನ ಸೊಸೆ ಹಾಗೂ ಮಗನ ಮೇಲೆ ಅವಲಂಬಿತರಾಗಿದ್ದಾರೆ ಎಂದು ಗೊತ್ತಿದ್ದರೂ ಕೂಡ ಅವರನ್ನು ಬಿಟ್ಟು ನಾವು ಈ ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸಾಕ್ಷಿ ಅವರು ಯಾವತ್ತೂ ನಮಗೆ ಆ ರೀತಿ ಹೇಳಿಲ್ಲ

ಎನ್ನುತ್ತಾರೆ. ಸದರಿಯವರೇ ಅರ್ಜಿ ಕೊಟ್ಟು ನ್ಯಾಯಾಲಯದ ಕಡತದ ಮೇಲೆ ಬಂದಿರುತ್ತಾರೆ ಎಂದರೆ ಅವರ ನಮ್ಮ ಕುಟುಂಬ ಹೇಗೆ ಆಗುತ್ತಾರೆ ಎನ್ನುತ್ತಾರೆ. ನಾವು ಸದರಿ ಅರ್ಜಿಯಲ್ಲಿ 3 ಮತ್ತು 4 ನೇ ಎದುರುದಾರರು ನನ್ನ ಸೊಸೆ ಹಾಗೂ ಮಗನ ಮೇಲೆ ಅಲಂಬಿತರಿಲ್ಲ ಎಂದು ಬರೆದುಕೊಳ್ಳದಿದ್ದರೂ ಕೂಡ ಈಗ ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ 2 ನೇ ಅರ್ಜಿದಾರರು 3 ಮತ್ತು 4 ನೇ ಎದುರುದಾರರಿಗೆ ಮೊಮ್ಮಗನಾಗಬೇಕು ಎಂದರೆ ಸರಿ. ಸದರಿ ಪರಿಹಾರದಲ್ಲಿ ಅವರಿಗೆ ಯಾವುದೇ ಪಾಲು ಹೋಗಬಾರದು ಎಂಬ ಕಾರಣಕ್ಕೆ ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**